
ಪದಬಂಧ




**ಎಡದಿಂದ ಬಲಕ್ಕೆ**

1. ಅವರ ನಡುವಣ ಹೊಸ ಬಾಂಧವ್ಯ ಮಂಗಳಕರ ಆರಂಭವೇ ಸರಿ 4
3. ಕಂದಕವನ್ನು ತೋಡುವ ಕ್ರಮ ಕುರಿತ ಸುದೀರ್ಘ ನಿರೂಪಣೆ 3
4. ಕಾವಲಿರಲು ಒಪ್ಪಿ ಬಂದವನ ಮನೆಯ ಬಳಿ ಬೃಹತ್ ಗೆದ್ದಲಿನ ಹುತ್ತ 3
6. ಕಳೆದುಕೊಂಡರೂ ಚಿಂತಿಸದಿರಲು ಕಾರಣ ಅಡು ಕದ್ದು ತಂದಿದ್ದ ಹಣ 4
7. ಎಂಥ ಆತಂಕಕ್ಕೆ ಕಾರಣವಾಯಿತು ನೋಡಿ, ಆಕೆಯ ಸಹಿ 3
9. ಕಂದಕಕ್ಕೆ ಬಿದ್ದುಹೋಯಿತು ಕಂದನ ಕೈಲಿದ್ದ ಚೆಂಡು 3
11. ಗೆದ್ದು ಬಂದವನನ್ನು ಪುರಸ್ಕರಿಸಲು ನೀಡಿದ್ದು ನೇರ ಹಣ 3
13. ಸವತಿಯ ಕಾಟದಿಂದ ದೂರವಾಗಲು ನಿರ್ಮಿಸಿದ್ದು ಈ ವಾಸದ ಮನೆ 3
15. ಅಂಗರಾಗಕ್ಕೆ ಕೈ ಹಚ್ಚುವ ಮೊದಲು ನೆನಪಾದದ್ದು ಮಂಗಳ ಗ್ರಹ 4
17. ಕೇವಲ ಭೂಷಣವನ್ನು ನೋಡಿಯೇ ಗೌರವ ಸಿಕ್ಕಿದ್ದು ಆತನ ಅದೃಷ್ಟ 3
18. ಒತ್ತಡವೇನೇ ಬರಲಿ, ಆಗೆಲ್ಲ ಆಕೆಯದು ಇಂಥದೇ ನಡವಳಿಕೆ 3
19. ಆತನ ಜೊತೆಗಾರನ ಬಡತನಕ್ಕೆ ಇಂಥ ಸೋಮಾರಿತನವೇ ಕಾರಣ 4

**ಮೇಲಿನಿಂದ ಕೆಳಕ್ಕೆ**

1. ಶೇಖರನ ಮನೆಯಲ್ಲಿ ಇದೆಂಥ ಭಾರೀ ನಾಯಿ? 3
2. ನ್ಯಾಯಾಲಯವನ್ನು ಸುಂದರಗೊಳಿಸಿದ್ದು ನಮ್ಮ ದೇಶದವನಲ್ಲ 3
3. ಕಿಟಕಿಯಲ್ಲೇ ಮುಖವಿಟ್ಟು ಆಡಿದ್ದು ಬರೀ ಚುಚ್ಚುನುಡಿ 3
5. ಕಾದಿರಿಸಿದ ಎಲ್ಲ ವಸ್ತುಗಳೂ ಕಪ್ಪು ಬಣ್ಣದವು 3
7. ದಾನ ಪಡೆದ ಕೂಡಲೇ ಆತ ಅಲ್ಲೇ ಕಣ್ಮರೆಯಾದ 4
8. ಏನನ್ನೂ ತರದೆ ಬರಬಾರದು ಎಂದು ವಿಧಿಸಲು ಭಾರೀ ಪ್ರಯತ್ನ 4
9. ಕಂಠದಲ್ಲಿರುವ ಧ್ವನಿಯನ್ನೇ ಬಳಸಿ ಸಿಂಹದಂತಾಗುವುದು ಹೇಗೆ? 4
10. ರಾಮನ ಅತ್ತಿತ್ತ ಕತ್ತಿಯನ್ನಿರಿಸಿ ಇದೇನು ಕೈಚಳಕ? 4
12. ಆ ಮಿತ್ರರ ಹಗೆತನ ಬಂದದ್ದು ಹೇಗೆಂಬುದೇ ನಿಗೂಢ 3
14. ಹೊಸದೇನನ್ನೇ ಕಲಿತು ಸಾಧಿಸಲೂ ತುಂಬ ತಾಳ್ಮೆ ಬೇಕು 3
15. ಆ ಅಂಜುಬುರುಕನಿಗೆ ಹೇಗೆ ಸಿಕ್ಕೀತು ಹೇಳಿ ತಾವರೆ? 3
16. ಇಡೀ ಕಾವ್ಯದ್ದೇ ಹ್ರಸ್ವರೂಪದಂತಿದೆ ಈ ಪದ್ಯ 3

---

**20–11–2025 ಉತ್ತರಗಳು**

**ಎಡದಿಂದ ಬಲಕ್ಕೆ**

1. ಉದಾಸೀನ 3. ಧರಣಿ 4. ಮಿನುಗು 6. ಸುಲಭಿಸು 7. ತರಕಾರಿ 8. ಚತುರ್ವಿಧ 10. ಯಕ್ಷಪ್ರಶ್ನೆ 12. ದೇವರಾಜ 14. ತಾರಾಬಲ 16. ನಶ್ವರ 17. ಲಾಲಿಸು 18. ಕಳ್ಳಕೂಟ

**ಮೇಲಿನಿಂದ ಕೆಳಕ್ಕೆ**

1. ಉಣಿಸು 2. ನಮಿಸು 3. ಧರ್ಮಕಾರ್ಯ 5. ಗುರುತು 7. ತರುವಾಯ 9. ಧರ್ಮರಾಜ 11. ಪ್ರಧಾನ 13. ಹವಣಿಸು 14. ತಾರಕ 15. ಲಲಾಟ

ಪ್ರಶ್ನಾಂಕಣ


# ಮಂಕಾಗುತ್ತಿದೆಯೇ ನಮ್ಮ ಭೂಮಿ?

ಹಗಲಿನಲ್ಲಿ, ಬಿಸಿಲಿನ ಸಮಯದಲ್ಲಿ ಅಂತರಿಕ್ಷದಿಂದ ಗೋಚರಿಸುವಂತೆ ನಮ್ಮ ಭೂಮಿಯದು ಒಂದು ಸುರಸುಂದರ ದೃಶ್ಯ (ಚಿತ್ರ1). ಉಜ್ವಲ ತಿಳಿ ನೀಲಿ ವರ್ಣದ ಸಾಗರಾವಾರ, ಹಸಿರಿನ ಛಾಯೆಯ ಸಸ್ಯಭರಿತ ನೆಲಾವಾರ, ಅಲ್ಲಲ್ಲಿ ತೇಲಾಡುವ ಮೋಡ ಸಹಿತ ವಾತಾವರಣ ಇವುಗಳಿಂದ ಸಂಯೋಜನೆಗೊಂಡ ರೂಪ ಅದು. ಸೂರ್ಯನಿಂದ ಬಂದೆರಗುವ ಬೆಳಕನ್ನು ಭೂಮಿಯ ನೆಲ, ಕಡಲುಗಳು, ಮೋಡಗಳು... ಇತ್ಯಾದಿ ನಿರ್ಮಿತಿಗಳು ಬೇರೆ ಬೇರೆ ಪ್ರಮಾಣಗಳಲ್ಲಿ ಹೀರಿಕೊಂಡು ಉಳಿದಿದ್ದನ್ನು ಆಕಾಶದತ್ತಲೇ ಪ್ರತಿಫಲಿಸುತ್ತವೆ. ಈ ವಿದ್ಯಮಾನದ ಪರಿಣಾಮವೇ ಧರೆಯ ಮನಮೋಹಕ ರೂಪಕ್ಕೆ ಕಾರಣ.

ಹೀಗೆ ವಸ್ತುವೊಂದು ಅದರ ಮೇಲೆ ಬೀಳುವ ಬೆಳಕನ್ನು ಒಂದಷ್ಟು ಹೀರಿ ಉಳಿದಿದ್ದನ್ನು ಪ್ರತಿಫಲಿಸುವ ಸಾಮರ್ಥ್ಯವೇ ಆ ವಸ್ತುವಿನ ಪ್ರತಿಫಲನ ಗುಣಾಂಕ (ಆಲ್ಬೆಡೋ). ನಮ್ಮ ಇಡೀ ಭೂಮಿಯ ಸರಾಸರಿ ಆಲ್ಬೆಡೋ 0.3. ಹಾಗೆಂದರೆ ಭೂಮಿ ತನ್ನ ಮೇಲೆ ಬೀಳುವ ಬೆಳಕಿನ ಶೇಕಡ 70ರಷ್ಟು ಭಾಗವನ್ನು ಹೀರಿಕೊಂಡು ಉಳಿದ ಶೇಕಡ 30 ಭಾಗವನ್ನು ಪ್ರತಿಫಲಿಸುತ್ತದೆ ಎಂದರ್ಥ. ಆಲ್ಬೆಡೋ ಹೆಚ್ಚಿದ್ದಷ್ಟೂ (ಗರಿಷ್ಠ 1) ಆ ವಸ್ತು ಹೆಚ್ಚು ಹೆಚ್ಚು ಹೊಳೆಯುತ್ತದೆ; ಕಡಿಮೆ ಇದ್ದಷ್ಟೂ ಮಂಕಾಗಿರುತ್ತದೆ.

ಭೂಮಿಯ ಆಲ್ಬೆಡೋ 0.3 ಆಗಿರುವುದು ಇಲ್ಲಿನ ಸಕಲ ಜೀವಾನುಕೂಲ ವ್ಯವಸ್ಥೆಗಳಿಗೂ ತುಂಬ ಸೂಕ್ತವಾದದ್ದಾಗಿದೆ. ಆಲ್ಬೆಡೋ ಇದಕ್ಕಿಂತ ಕಡಿಮೆಯಾದರೆ ಭೂಮಿ ಹೆಚ್ಚು ಬಿಸಿಯಾಗುತ್ತದೆ; ಆಲ್ಬೆಡೋ ಹೆಚ್ಚಾದರೆ ಭೂ ಪರಿಸರ ತಣ್ಣಗಾಗುತ್ತದೆ. ಹೀಗೆ ಯಾವುದೇ ಆದರೂ ಧರೆಯ ಗಾಳಿ ಪರಿಚಲನೆ, ಮೋಡ ಪರಿಚಲನೆ, ಜಲ ಪರಿಚನೆ (ಎಂದರೆ ಮಳೆ ವ್ಯವಸ್ಥೆ), ಸಾಗರ ಪ್ರವಾಹಗಳ ಚಲನೆ ಇತ್ಯಾದಿ ಹೇರಳ ವ್ಯವಸ್ಥೆಗಳು ಲಯ ತಪ್ಪುತ್ತವೆ; ಅಧ್ವಾನಗೊಳ್ಳುತ್ತವೆ.

1



2

ಭೂಮಿಯ ಆಲ್ಬೆಡೋ ಕುರಿತ ಅತ್ಯಂತ ಇತ್ತೀಚಿನ ಒಂದು ವೈಜ್ಞಾನಿಕ ಅಧ್ಯಯನ ಭೂಮಿಯ ಪ್ರತಿಫಲನ ಸೂಚ್ಯಂಕವನ್ನು ಕುರಿತ ಒಂದೆರಡು ಗಂಭೀರ, ಆತಂಕಕರ ತಳಮಳಗಳು ಮೈದಳೆಯುತ್ತಿರುವುದನ್ನು ತೆರೆದಿಟ್ಟಿವೆ. ಮೊದಲಿಗೆ ಕೃತಕ ಉಪಗ್ರಹಗಳ ನೆರವಿನಿಂದ ಸಂಗ್ರಹಿಸಿರುವ ಕಳೆದ 24 ವರ್ಷಗಳ ಭೂಮಿಯ ಆಲ್ಬೆಡೋ ಕುರಿತ ಅಂಕಿಅಂಶಗಳ ಪ್ರಕಾರ ಭೂಮಿಯ ಈ ಗುಣ ತುಂಬ ನಿಧಾನವಾಗಿ, ಸೂಕ್ಷ್ಮವಾಗಿ ಕಡಿಮೆಯಾಗುತ್ತಿದೆ; ಎಂದರೆ ಭೂಮಿಯ ಪ್ರತಿಫಲನಾ ಸೂಚ್ಯಂಕ ಕಡಿಮೆಯಾಗುತ್ತ ಭೂಮಿಯ ಹೊಳಪು ದಿನೇ ದಿನೇ ಕಡಿಮೆಯಾಗುತ್ತಿದೆ! ಇನ್ನೂ ಆತಂಕದ ಅಂಶ ಏನೆಂದರೆ, ಭೂಮಿಯ ಉತ್ತರಾರ್ಧಗೋಳ ದಕ್ಷಿಣಾರ್ಧ ಗೋಳಕ್ಕಿಂತ ಹೆಚ್ಚು ಸೌರಶಕ್ತಿಯನ್ನು ಹೀರಿಕೊಳ್ಳುತ್ತಿದೆ. ಹಾಗೆಂದರೆ, ಭೂ ಉತ್ತರಾರ್ಧ ಗೋಳ ದಕ್ಷಿಣಾರ್ಧ ಗೋಳಕ್ಕಿಂತ ಹೆಚ್ಚು ಬಿಸಿಯಾಗುತ್ತಿದೆ ಮತ್ತು ಹೆಚ್ಚು ಮಂಕಾಗಿದೆ.

ಈ ವ್ಯತ್ಯಾಸ ಒಂದು ಸೂಕ್ಷ್ಮ ಮಿತಿಯನ್ನು ಮೀರಿದರೆ ಹಲವಾರು ಪಾರಿಸರಿಕ ತಳಮಳಗಳು ಮೈದಳೆಯುತ್ತವೆ. ಆ ಕುರಿತೇ ಪ್ರಸ್ತುತ ಜಗದಾದ್ಯಂತ ತೀವ್ರ ಆತಂಕ.

■ ಎನ್. ವಾಸುದೇವ್